# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕವಿಪ್ರನಿನಿ/ಔಬಾ/ಬಿ23/24361/15-16
ಲಗತ್ತು:

ನಿಗಮ ಕಾರ್ಯಾಲಯ, ಕಾವೇರಿ ಭವನ”
ಬೆಂಗಳೂರು–560 009
ದಿನಾಂಕ: ----------------
26 APR 2016

ಎಲ್ಲಾ ಪ್ರಧಾನ ವ್ಯವಸ್ಥಾಪಕರು (ಆ. ಮಾ. ಸಂ.ಅ),
ಬೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಗೆಸ್ಕಾಂ/ಸೆಸ್ಕ್.
ಬೆಂಗಳೂರು/ಹುಬ್ಬಳ್ಳಿ/ಮಂಗಳೂರು/ಕಲಬುರಗಿ/ಮೈಸೂರು.

ಎಲ್ಲಾ ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ ಕಛೇರಿ, ಕವಿಪ್ರನಿನಿ,
ಬೆಂಗಳೂರು/ತುಮಕೂರು/ಹಾಸನ/ಮೈಸೂರು/ಕಲಬುರಗಿ/ಬಾಗಲಕೋಟ.

ಮಾನ್ಯರೇ,

ವಿಷಯ: ರಿಟ್ ಅರ್ಜಿ ಸಂಖ್ಯೆ: 101732–938/2015 (S-Res) ಶ್ರೀ ಗೋಪಾಲ ಸಿಂಪಿ ಮತ್ತು ಇತರರು ವಿರುದ್ಧ ಕವಿಪ್ರನಿನಿ ಮತ್ತು ಹೆಸ್ಕಾಂ.

ಉಲ್ಲೇಖ: ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ ಧಾರವಾಡ ರವರ ಆದೇಶ ದಿನಾಂಕ: 15.03.2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕವಿಪ್ರನಿನಿ ಬಾಗಲಕೋಟೆ ವಲಯ ವ್ಯಾಪ್ತಿಗೆ ಒಳಪಡುವ ವಿದ್ಯುತ್ ಉಪಕೇಂದ್ರಗಳಲ್ಲಿ ಗುತ್ತಿಗೆದಾರರ ಬಳಿ ಕಾರ್ಯ ನಿರ್ವಹಿಸುತ್ತಿರುವ ಶಿಫ್ಟ್ ಇಂಜಿನಿಯರ್ಸ್, ಶಿಫ್ಟ್ ಹೆಲ್ಪರ್ಸ್‌ಗಳು, ನಿಗಮದಲ್ಲಿ ಖಾಯಮಾತಿ ಹಾಗೂ ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದತಿ ಕೋರಿ ಶ್ರೀ ಗೋಪಾಲ ಸಿಂಪಿ ಮತ್ತು ಇತರರು ರಿಟ್ ಅರ್ಜಿ ಸಂಖ್ಯೆ: 101732–938/2015 ಮಾನ್ಯ ರಾಜ್ಯ ಉಚ್ಚನ್ಯಾಯಾಲಯದ ಧಾರವಾಡ ಸಂಚಾರಿ ಪೀಠದಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಸದರಿ ಪ್ರಕರಣದಲ್ಲಿ ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯವು ದಿನಾಂಕ:15-03-2016 ರ ಆದೇಶದಲ್ಲಿ ಅರ್ಜಿದಾರರ ಮನವಿಯನ್ನು ತಿರಸ್ಕರಿಸಿರುತ್ತದೆ.

ಮುಂದುವರೆದಂತೆ, ಸದರಿ ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಈ ಪತ್ರದೊಂದಿಗೆ ಮಾಹಿತಿಗಾಗಿ ಲಗತ್ತಿಸಲಾಗಿದ್ದು, ತಮ್ಮ ಕಂಪನಿ/ವಲಯಗಳಲ್ಲಿ ಗುತ್ತಿಗೆದಾರರ ಬಳಿ ಕಾರ್ಯ ನಿರ್ವಹಿಸುತ್ತಿರುವ ಪಾಳಿ ಇಂಜಿನಿಯರ್ಸ್ ಹಾಗೂ ಪಾಳಿ ಹೆಲ್ಪರ್ಸ್‌ಗಳು ನ್ಯಾಯಾಲಯದಲ್ಲಿ ದಾವೆಗಳನ್ನು ಈಗಾಗಲೇ ಹೂಡಿದ್ದರೆ ಹಾಗೂ ಇನ್ನು ಮುಂದೆ ಅಂತಹ ಪ್ರಕರಣಗಳು ದಾಖಲಾದಲ್ಲಿ ನಿಗಮದ ಪರವಾಗಿ ಆಕ್ಷೇಪಣಾ ವರದಿಯನ್ನು ಸಲ್ಲಿಸುವಾಗ ರಿಟ್ ಅರ್ಜಿ ಸಂಖ್ಯೆ: 101732–938/2015(S-Res) ಪ್ರಕರಣದಲ್ಲಿನ ಆದೇಶವನ್ನು ಸಹ ಉಲ್ಲೇಖಿಸಿ ಮಾನ್ಯ ನ್ಯಾಯಾಲಯದ ಗಮನಕ್ಕೆ ತಂದು ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

ತಮ್ಮ ವಿಶ್ವಾಸಿ,

ನಿರ್ದೇಶಕರು(ಆ. ಮಾ.ಸಂ)
ಕ.ವಿ.ಪ್ರ.ನಿ.ನಿ.

ಪ್ರತಿ:- ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಕವಿಪ್ರನಿನಿ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ.

26/4/16 AEE-4/AE-1
26/4/2016